ಅಲ್ಲಾಡುತ್ತೊ ಅನ್ನೋ ಹಾಗೆ, ಹೆಂಡತಿಯೊಂದಿಗೆ ಸಹಜ, ಸಲಿಗೆಯಿಂದ ಮಾತಾಡೋದು ದೌರ್ಬಲ್ಯದ ಸಂಕೇತವಾಗಿ ಕಂಡ ಹಾಗೆ. ಹೊಸ ಅಕ್ಕಿ ತಂದಾಗ ಅನ್ನ ಸ್ವಲ್ಪ ಗಟ್ಟಿಯಾದರೆ ಹೋ ದೇವಾ ಏನು ಸಿಟ್ಟು! ಸ್ವಲ್ಪ ಉಪ್ಪು ಹೆಚ್ಚು ಕಮ್ಮಿಯಾದರೆ ತಟ್ಟೆ ತಳ್ಳಿ ಎದ್ದು ಬಿಡುವ ಧಾರ್ಷ್ಟ್ಯ. ಊಟ ಮಾಡೋದು ತನಗೆ ಉಪಕಾರ ಮಾಡುವಂತೆ... ತಪ್ಪು ನಮ್ಮದೇ, ತಲೆ ಮೇಲೆ ಹೊತ್ತು ಮೆರೆಯೋ ಹುಚ್ಚತನ ತೋರೋದು ನಾವೇ ತಾನೆ... ತನಗೇ ಅಂದುಕೊಂಡು ಸುಮ್ಮನಾಗುತ್ತಿದ್ದಳು.

ಮಧ್ಯಾಹ್ನದ ಹೊತ್ತು ಅವಳು ಮತ್ತು ಪುಸ್ತಕದ ಕಪಾಟು. ಆಗೊಮ್ಮೆ ಈಗೊಮ್ಮೆ ದತ್ತು ಮೇಷ್ಟ್ರು ತರುತ್ತಿದ್ದ ಹೊಸ ಪುಸ್ತಕಗಳು ಸತ್ಯನ ಧ್ಯಾನದ ಹೊತ್ತು. ಕಿಟಕಿಯಿಂದ ಹೊರ ನೋಡಿದರೆ ದಾಸವಾಳದ ಬಟ್ಟಲಿನಂತಹ ಎಲೆಗಳನ್ನು ಸೂಜಿಯಿಂದ ಹೊಲಿದಂತೆ ಭಯಂಕರ ಗಡಿಬಿಡಿಯಿಂದ ಗೂಡು ಕಟ್ಟುವ ದರ್ಜಿ ಹಕ್ಕಿಗಳು. ಅವುಗಳಲ್ಲಿ ಗಂಡ ಯಾರು ಹೆಂಡತಿ ಯಾರೆಂದೇ ಸತ್ಯನಿಗೆ ತಿಳಿಯುತ್ತಿರಲಿಲ್ಲ. ಸಹಜೀವನ ಎಂದರೆ ಏನು ಅನ್ನೋದನ್ನು ಈ ಹಕ್ಕಿಗಳನ್ನೂ ನೋಡಿ ಮನುಷ್ಯ ಕಲಿಯುತ್ತಿಲ್ಲ. ಎಲ್ಲೊ ಓದಿದ ನೆನಪಾಯ್ತು, 'ಬರ್ಡ್ ಬ್ರೈನ್' ಎಂದರೆ ಕಡಿಮೆ ಚಾಣಾಕ್ಷತನದ್ದು ಎಂದರ್ಥದಲ್ಲಿ. ನಗು ಮೂಡಿತು. ಈ ಹಕ್ಕಿಗಳು ನಿಜಕ್ಕೂ ಕಡಿಮೆ ಬುದ್ಧಿಯವೆ! ಸಂಗಾತಿಯನ್ನು ಗೌರವಿಸುವ, ಸಹಜೀವನದ ಮಹತ್ವವನ್ನು ಅರಿತ ಇವೇ ನಿಜವಾದ ಬುದ್ಧಿವಂತ ಜೀವಿಗಳು. ಇದನ್ನು ಅರ್ಥ ಮಾಡಿಕೊಳ್ಳಲೂ ಎಷ್ಟು ಕಷ್ಟ ಮನುಷ್ಯನಿಗೆ. ಮಾವ ತೀರಿಕೊಂಡಾಗ ತಿಂಗಳಾದರೂ ದುಃಖಿಸುತ್ತಿದ್ದ ಅತ್ತೆಯನ್ನು ನೋಡಿ ಸತ್ಯಳಿಗೆ ಸಂಕಟವಾಗುತ್ತಿತ್ತು. ಮನುಷ್ಯ ಜೀವಂತ ಇರುವುದಷ್ಟೇ ಖುಷಿಯ ಸಂಗತಿಯೇ! ಸಾಂಗತ್ಯವೆಂದರೆ ಜೊತೆಯಲ್ಲಿ ದಿನ ತಳ್ಳುವುದೇ! ಪರಸ್ಪರರು ಒಂದು ಮನೆಯಲ್ಲಿ ಒಟ್ಟಿಗೆ ಬದುಕಿದ್ದರೆ ದೀರ್ಘ ದಾಂಪತ್ಯ! ಅತ್ತೆ ಮಾವನ ಸಂಬಂಧವೇನೂ ಮಧುರ ದಾಂಪತ್ಯದಂತೆ ಸತ್ಯನಿಗೆ ಕಂಡಿರಲಿಲ್ಲ. ತನ್ನ ದಾಂಪತ್ಯಕ್ಕಿಂತ ಸ್ವಲ್ಪ ಉತ್ತಮವೆಂದಷ್ಟೇ ಕಂಡಿತ್ತು. 'ದುಃಖ ಸಹಜ ಅತ್ತೆ. ಆದ್ರೆ ಮಾವ ಇದ್ದುದಷ್ಟೇ ನಿಮಗೆ ಸತ್ಯ! ಗಂಡ ಹೆಂಡತಿ ಜೊತೆಯಲ್ಲಿ ಹುಟ್ಟಿಲ್ಲ, ಜೊತೆಯಲ್ಲಿ ಸಾಯಲ್ಲ. ನೀವು ಅವರೊಂದಿಗೆ ಕಳೆದ ಖುಷಿಯ ಗಳಿಗೆಗಳನ್ನು ನೆನಪು ಮಾಡಿಕೊಳ್ಳಿ. ಅವರ ಜೊತೆ ಇಲ್ಲದೆಯೂ ನಿಮಗೂ ಒಂದು ಬದುಕು ಇದೆಯಲ್ವ. ನಿಮ್ಮ ಬದುಕನ್ನು ಇವತ್ತಿನಿಂದ ಆರಂಭಿಸಿ. ನೀವೆಲ್ಲ, ನಿಮ್ಮ ಪ್ರಪಂಚ ಅಂದ್ರೆ ನಿಮ್ಮ ಗಂಡಂದಿರು ಅನ್ನೋ ಹಾಗೇ ಬದುಕಿಯೇ ಇವ್ರೆಲ್ಲ ಇಷ್ಟು ಹೆಂಡತಿಯರನ್ನು ಸಸಾರ ಮಾಡೋದು' ಎಂದೇನೋ ಹೇಳಿ ಬೈಸಿಕೊಂಡಿದ್ದಳು.

ಅತ್ತೆ ಮಾವ ಗತಿಸಿದ ಬಳಿಕ ಸತ್ಯ ತನ್ನದೇ ಪರವಶತೆಯನ್ನು ರೂಢಿಸಿಕೊಂಡಾಗಿತ್ತು. ಶಾಲೆಯ ಮಕ್ಕಳು, ದತ್ತು ಮೇಷ್ಟ್ರ ಸಹೋದ್ಯೋಗಿಗಳು, ಮಂಜಾಡಿ ಊರಿನ ಎಲ್ಲರಿಗೂ ಸತ್ಯಕ್ಕ ಕಡಿಮೆ ಮಾತಿನ, ಆದರೆ ಅತ್ಯಂತ ಮೃದುಹೃದಯಿಯಾಗಿದ್ದಳು. ಆದರೆ, ಎಲ್ಲವನ್ನೂ ನಿರ್ವಿಕಾರದಿಂದ ಮಾಡುತ್ತಿದ್ದ ಅಮ್ಮನ ವರ್ತನೆಯಲ್ಲಿ ಅಪ್ಪನ ಕಡೆಗೊಂದು ಅತ್ಯಂತ ಶಾಂತನಡೆ ಮತ್ತು ಚಡಪಡಿಕೆಯನ್ನು ಏಕಕಾಲದಲ್ಲಿ ಜಯಂತ ಗಮನಿಸಿದ್ದ. ಬೇಗ ಎಲ್ಲವನ್ನು ಮುಗಿಸಿ ಹೋಗಬೇಕೆನ್ನುವ ತುಡಿತ ಇದ್ದಂತೆ ಅನಿಸುತ್ತಿತ್ತು. ಸುಮಂತ ಡಿಗ್ರಿ ಪಾಸಾಗಿ ತಾಲ್ಲೂಕು ಕಚೇರಿಯಲ್ಲಿ ಕೆಲಸವನ್ನು ಪಡೆದು ನೆಲೆಯಾದರೆ, ಜಯಂತ ತಾನು ಬೆಂಗಳೂರಿನ ವಿಜ್ಞಾನ ಸಂಸ್ಥೆಯಲ್ಲಿಯೇ ಮಾಸ್ಟರ್ಸ್ ಮಾಡುವವನು ಎಂದು ಹಟ ಹಿಡಿದು ಹೋಗಿದ್ದ. ಮಕ್ಕಳಿಗೆ ಪಾಠ ಮಾಡಿಕೊಂಡು ತನ್ನ ಮೇಲುಖರ್ಚಿಗೆ ದುಡ್ಡು ಹೊಂದಿಸಿಕೊಂಡು ಅಲ್ಲೇ ಪಿಎಚ್.ಡಿ. ಮಾಡಿ ಕೆಲಸವನ್ನೂ ಗಿಟ್ಟಿಸಿದಾಗ ತಾನು ಬಿಕ್ಕಳಿಸಿ ಅತ್ತಿದ್ದು ಯಾಕೆಂದು ಸತ್ಯಳಿಗೂ ತಿಳಿಯಲಿಲ್ಲ.

ಜಯಂತ ತಾನಿಷ್ಟ ಪಟ್ಟ ಹುಡುಗಿಯೊಂದಿಗೆ ಮದುವೆ ಆಗಿ ನೆಲೆಗೊಂಡ ಅನ್ನುವಾಗಲೇ ಸತ್ಯನ ಚಡಪಡಿಕೆ ನಿಂತದ್ದು. ಮಂಜಾಡಿಗೆ ಬಂದ ಜಯಂತ ಮತ್ತವನ ಪತ್ನಿಯ ಸುತ್ತಾಟವೆಲ್ಲ ಮುಗಿದು ಹೊರಡಲು ತಯಾರಾದರು. ಆಗ ಸತ್ಯ ಜಯಂತನಲ್ಲಿ ಮಾತಾಡಿದಳು.